

ಎಂ.ಎಸ್. ಆಶಾದೇವಿ

# ‘ದೇವ್ರ ಮುಂದೆ ದೇವ್ರಾಗ್ ಬೇಕು...’

## ಬೆಂಕಿಯನ್ನು ಹೂವಾಗಿ ಅರಳಿಸಿಕೊಂಡವರ ಕಥನಗಳು

‘ನಾವು ಕೂಗುವಾ ಕೂಗು’ ಕನ್ನಡದ ಬಹುಮುಖ್ಯ ಸಾಂಸ್ಕೃತಿಕ ಪಠ್ಯಗಳಲ್ಲಿ ಒಂದು ಎನ್ನುವುದರಲ್ಲಿ ನನಗಂತೂ ಅನುಮಾನವಿಲ್ಲ. ಲೋಕ ಕಾಣದ ಲೋಕವನ್ನು ಕಟ್ಟಿಕೊಟ್ಟ ಸಂಪಾದಕರಾದ ಕೃಷ್ಣಮೂರ್ತಿ ಹನೂರು ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲಬೇಕು. ವಿಪರ್ಯಾಸದ, ದುರಂತದ ಸಂಗತಿಯೆಂದರೆ–ಪಿಸುಮಾತಲ್ಲದ, ಕೇವಲ ಮಾತೂ ಅಲ್ಲದ, ಕೂಗೇ ಆಗಿರುವಾಗಲೂ ಲೋಕಕ್ಕೆ ಈ ಲೋಕದ ಬಿಸಾತಿಲ್ಲ ಎಂದರೆ, ಲೋಕದಲ್ಲಿ ನಮಗೆ ಕಾಂಬ ಕಣ್ಣುಗಳೇ ಹೋಗಿಬಿಟ್ಟಿವೆಯೇನೋ ಅನ್ನಿಸಿಬಿಟ್ಟಿತು. ನಿಜ ಬಡತನದ ಬಗ್ಗೆ, ಶೋಷಣೆಯ ಬಗ್ಗೆ, ತಳ ಸಮುದಾಯಗಳ ಬಹುತೇಕ ಸಂದರ್ಭಗಳಲ್ಲಿ ಕುರುಡೇ ಸತ್ಯ ಎನ್ನುವುದು ನಿಜವೇ. ಆದರೆ ಸಾಂಸ್ಕೃತಿಕವಾಗಿ ಬಿಟ್ಟೂ ಬಿಡದೆ ಈ ಸಮುದಾಯವನ್ನು ಬಳಸಿಕೊಳ್ಳುತ್ತಲೇ, ಕೊಂಡಾಟ ಮಾಡುತ್ತಲೇ ನಮಗೆ ಇಂಥ ಕುರುಡುತನವಿದೆ ಎಂದರೆ ಅಕ್ಷಮ್ಯ ಎನ್ನಿಸಿಬಿಟ್ಟಿತು.

ಈ ಲೋಕದ ಎದುರಿಗೆ ಮೇಲ್ಜಾತಿಯ, ಮೇಲ್ವರ್ಗದ, ಸಕಲ ಸವಲತ್ತುಗಳನ್ನು ಉಣ್ಣುತ್ತಾ ಇರುವವರು ಏನು ಮಾಡಿದರೂ ಏನೂ ಇಲ್ಲದೆಯೇ ಮನಸ್ಸಿನ ಸಮೃದ್ಧತೆಯನ್ನು, ಸೃಜನಶೀಲತೆಯನ್ನು ಉಳಿಸಿಕೊಂಡ ಇವರೇ ನಿಜವಾದ ಸಾಂಸ್ಕೃತಿಕ ನಾಯಕರು. ಇಂಥ ನಾಯಕರ ಕಥನಗಳನ್ನು ಓದುವುದು ಬೆರಗು ಮತ್ತು ಅರಿವು ಎರಡರ ಅನುಭವವನ್ನೂ ಕೊಡುತ್ತದೆ. ಇತ್ತೀಚಿನ ದಿನಗಳಲ್ಲಿ ಮೊಗಳ್ಳಿಯವರ ಆತ್ಮಕಥನ ‘ನಾನೆಂಬುದು ಕಿಂಚಿತ್ತು’ ಕೃತಿಯ ಓದಿನ ನಂತರ ಮನಸ್ಸನ್ನು ಬಹುವಾಗಿ ಆವರಿಸಿದ ಕೃತಿ ಇದು.

ಲೋಕದ ನಿಷ್ಕರುಣೆಯ ಎದುರಿಗೆ ಇವರ ಕಾರುಣ್ಯ ದೊಡ್ಡದಾಗಿ ಕಾಣುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ತಮ್ಮ ಪ್ರತಿಭೆ–ಸಾಧನೆ ಎಲ್ಲವನ್ನೂ